ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2017-18 ದಿನಾಂಕ: 20-6-2017

# ಮಾಧ್ಯಮ ಮುಖ್ಯಸ್ಥರ ಗಮನಕ್ಕೆ

ಜುಲೈ ಮಾಹೆಯಲ್ಲಿ ರಾಷ್ಟ್ರಪತಿ ಚುನಾವಣೆ ನಡೆಯಲಿರುವ ಹಿನ್ನೆಲೆಯಲ್ಲಿ ಮತಗಟ್ಟೆ ವರದಿಗೆ ಆಗಮಿಸುವ ಮಾಧ್ಯಮ ಪ್ರತಿನಿಧಿಗಳಿಗೆ ಮುಖ್ಯ ಚುನಾವಣಾ ಕಛೇರಿಯಿಂದ ರಹದಾರಿ ಪತ್ರವನ್ನು ನೀಡಲಾಗುವುದು.

ಆದ್ದರಿಂದ ರಹದಾರಿ ಪತ್ರವನ್ನು ಪಡೆಯುವ ಸಲುವಾಗಿ ಜೂನ್ 24 ರೊಳಗೆ ತಮ್ಮ ಮಾಧ್ಯಮ ಪ್ರತಿನಿಧಿಯ ಹೆಸರನ್ನು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸುದ್ದಿ ಮತ್ತು ಪತ್ರಿಕಾ ಶಾಖೆಯಲ್ಲಿ ನೋಂದಾಯಿಸುವ ಜೊತೆಗೆ ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಎರಡು ಭಾವಚಿತ್ರಗಳನ್ನು ನೀಡಬೇಕು.

**ವಿಶೇಷ ಸೂಚನೆ: ಮಾಧ್ಯಮ ಪ್ರತಿನಿಧಿಗಳ ವಿವರವನ್ನು ಭಾವಚಿತ್ರದೊಂದಿಗೆ ಮುಂಚಿತವಾಗಿ ಕೇಂದ್ರ ಚುನಾವಣಾ ಕಛೇರಿಗೆ ಕಳುಹಿಸಿ ಅನುಮತಿ ಪಡೆಯುವುದು ಕಡ್ಡಾಯವಾಗಿರುವ ಕಾರಣ ನಿಗದಿತ ದಿನಾಂಕದ ನಂತರ ಹೆಸರನ್ನು ನೋಂದಾಯಿಸಿಕೊಳ್ಳಲಾಗುವುದಿಲ್ಲ. ರಹದಾರಿ ಪತ್ರಕ್ಕೆ ರಾಜ್ಯ ಮತ್ತು ರಾಷ್ಟ್ರಮಟ್ಟದ ದಿನಪತ್ರಿಕೆ ಮತ್ತು ಸುದ್ದಿವಾಹಿನಿಗಳ ಒಬ್ಬ ವರದಿಗಾರರು ಮತ್ತು ಒಬ್ಬ ಛಾಯಾಗ್ರಾಹಕರಿಗೆ ಮಾತ್ರ ಅವಕಾಶವಿರುತ್ತದೆ.**

# ಪತ್ರಿಕಾ ಆಮಂತ್ರಣ

## 1. ಅಂತಾರಾಷ್ಟ್ರೀಯ ಯೋಗ ದಿನಾಚರಣೆ:

ಉದ್ಘಾಟನೆ:

ಸಿದ್ದರಾಮಯ್ಯ, ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ವಿಶೇಷ ಆಹ್ವಾನಿತರು:

ಅನಂತಕುಮಾರ್, ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಖಾತೆ ಸಚಿವರು,
ಡಿ.ವಿ. ಸದಾನಂದ ಗೌಡ, ಕೇಂದ್ರ ಸಾಂಖ್ಯಿಕ ಮತ್ತು ಯೋಜನಾ ಅನುಷ್ಠಾನ ಖಾತೆ ಸಚಿವರು.
ಡಿ. ಹೆಚ್. ಶಂಕರಮೂರ್ತಿ, ಸಭಾಪತಿಗಳು, ವಿಧಾನ ಪರಿಷತ್, ಕರ್ನಾಟಕ ಸರ್ಕಾರ
ಕೆ.ಬಿ. ಕೋಳಿವಾಡ್, ಅಧ್ಯಕ್ಷರು, ವಿಧಾನಸಭೆ, ಕರ್ನಾಟಕ ಸರ್ಕಾರ.

ಅಧ್ಯಕ್ಷತೆ:

ಆರ್. ರೋಷನ್ ಬೇಗ್, ನಗರಾಭಿವೃದ್ಧಿ ಮತ್ತು ಹಜ್ ಸಚಿವರು.

ದಿನಾಂಕ: 21–06–2017, ಬುಧವಾರ, ಸಮಯ : ಬೆಳಿಗ್ಗೆ 6.30 ಗಂಟೆಗೆ
ಸ್ಥಳ: ಶ್ರೀ ಕಂಠೀರವ ಹೊರಾಂಗಣ ಕ್ರೀಡಾಂಗಣ, ಬೆಂಗಳೂರು.

2. ಕರ್ನಾಟಕ ವಿಧಾನ ಮಂಡಲ ತರಬೇತಿ ಸಂಸ್ಥೆಯ ವತಿಯಿಂದ ಕರ್ನಾಟಕ ವಿಧಾನ ಮಂಡಲದ ಸದಸ್ಯರುಗಳಿಗೆ "ಯೋಗ, ಧ್ಯಾನ, ಪ್ರಾಣಾಯಾಮ ಕಾರ್ಯಕ್ರಮ"

ದಿನಾಂಕ: 21–06–2017 ಬುಧವಾರ, ಸಮಯ: ಬೆಳಿಗ್ಗೆ 6–30 ಗಂಟೆಯಿಂದ 8.00 ಗಂಟೆವರೆಗೆ
ಸ್ಥಳ: ಸಮ್ಮೇಳನ ಸಭಾಂಗಣ, ಶಾಸಕರ ಭವನ ಕಟ್ಟಡ–2, ಬೆಂಗಳೂರು

## 3. ಕೃಷಿ ಪಂಡಿತ ಪ್ರಶಸ್ತಿ, ಕೃಷಿ ಪ್ರಶಸ್ತಿ ಮತ್ತು ಶ್ರೇಷ್ಠ ಕೃಷಿಕ ಪ್ರಶಸ್ತಿ ಪ್ರದಾನ ಸಮಾರಂಭ:

ಉದ್ಘಾಟನೆ ಮತ್ತು ಪ್ರಶಸ್ತಿ ಪ್ರದಾನ

ಸಿದ್ದರಾಮಯ್ಯ, ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ಸ್ಮರಣ ಸಂಚಿಕೆ ಬಿಡುಗಡೆ:

ಕೃಷ್ಣ ಬೈರೇಗೌಡ, ಕೃಷಿ ಸಚಿವರು.

ಅಧ್ಯಕ್ಷತೆ.

ಆರ್. ರೋಷನ್ ಬೇಗ್, ನಗರಾಭಿವೃದ್ಧಿ ಮತ್ತು ಹಜ್ ಸಚಿವರು.

**ದಿನಾಂಕ: 21–06–2017, ಬುಧವಾರ, ಸಮಯ : ಮಧ್ಯಾಹ್ನ 12–00 ಗಂಟೆಗೆ**
**ಸ್ಥಳ: ಬ್ಯಾಂಕ್ವೆಟ್ ಹಾಲ್, ವಿಧಾನಸೌಧ, ಬೆಂಗಳೂರು.**

# ವಿಧಾನ ಪರಿಷತ್ತಿನಲ್ಲಿ ಇಂದು

## ಪರಿಶಿಷ್ಟ ವರ್ಗದವರ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಅಭಿವೃದ್ಧಿಗೆ ಸರ್ಕಾರದ ಯೋಜನೆ

**ಬೆಂಗಳೂರು, ಜೂನ್ 20 (ಕರ್ನಾಟಕ ವಾರ್ತೆ)**

ಪರಿಶಿಷ್ಟ ವರ್ಗದವರ ನಿವೇಶನವಿದ್ದು ಮನೆ ನಿರ್ಮಿಸಿಕೊಳ್ಳಲಾಗದವರಿಗೆ ಆದ್ಯತೆ ಮೇಲೆ ಹಣಕಾಸು ನೆರವು ನೀಡುವುದು, ನಿವೇಶನವಿಲ್ಲದವರಿಗೆ ಸರ್ಕಾರಿ ಜಮೀನನನ್ನು ಗುರುತಿಸಿ ನಿವೇಶನ ಹಂಚುವುದು, ಸರ್ಕಾರಿ ಜಮೀನು ಲಭ್ಯವಾಗದ ಕಡೆಗಳಲ್ಲಿ ಖಾಸಗಿ ಜಮೀನನ್ನು ಖರೀದಿಸಿ ನಿವೇಶನವನ್ನು ಹಂಚಿಕೆ ಮಾಡಲಾಗುವುದು ಎಂದು ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಹೆಚ್. ಆಂಜನೇಯ ಅವರು ತಿಳಿಸಿದರು.

ಮಂಗಳವಾರ ವಿಧಾನ ಪರಿಷತ್ತಿನಲ್ಲಿ ಸದಸ್ಯೆ ಮೋಟಮ್ಮ ಅವರ ಪ್ರಶ್ನೆಗೆ ಉತ್ತರಿಸುತ್ತಾ ಪರಿಶಿಷ್ಟ ವರ್ಗದವರಿಗೆ ಮನೆ ದುರಸ್ತಿಗೆ ಆದ್ಯತೆ ನೀಡುವುದು, ಪ್ರತಿ ಜಿಲ್ಲೆ/ತಾಲ್ಲೂಕುಗಳಲ್ಲಿ ವಸತಿ ಗ್ರಾಮಗಳನ್ನು ನಿರ್ಮಿಸಿ ಅಗತ್ಯ ಮೂಲಭೂತ ಸೌಲಭ್ಯಗಳಾದ ದೀಪ, ನೀರು, ಚರಂಡಿ ಸೌಲಭ್ಯಗಳನ್ನು ಕಲ್ಪಿಸಿಕೊಡುವುದು ಎಂದು ಸದನಕ್ಕೆ ತಿಳಿಸಿದರು.

ಪರಿಶಿಷ್ಟ ಪಂಗಡಗಳ ಕಾಲೋನಿಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಅಂದರೆ ಕಾಲೋನಿಯಿಂದ ಮುಖ್ಯ ರಸ್ತೆಗೆ ಸಂಪರ್ಕ ರಸ್ತೆ ನಿರ್ಮಾಣ, ಕಾಲೋನಿಗಳಲ್ಲಿ ಸಿ.ಸಿ. ರಸ್ತೆ ಹಾಗೂ ಚರಂಡಿ ನಿರ್ಮಾಣ, ಕಾಲೋನಿಗಳಲ್ಲಿ ಕುಡಿಯುವ ನೀರು ಸರಬರಾಜು (ಕಿರು ನೀರು ಸರಬರಾಜು ಹಾಗೂ ತೆರೆದ ಬಾವಿ ರಚನೆ) ನೀರು ಶುದ್ಧೀಕರಣ ಘಟಕ, ಸೋಲಾರ್ ಬೀದಿ ದೀಪ, ಚೆಕ್ ಡ್ಯಾಂ ಹಾಗೂ ಕೃಷಿ ಹಿಡುವಳಿಗಳಿಗೆ ಪಂಪ್ ಸೆಟ್ ಮೂಲಕ ನೀರು ಪೂರೈಕೆ ಮತ್ತು ಬದು ನಿರ್ಮಾಣ ಹಾಗೂ ಭೂಮಿ ಸಮತಟ್ಟು ಮಾಡಲಾಗುತ್ತಿದೆ. ಪರಿಶಿಷ್ಟ ವರ್ಗದ ಜನರ ಸಮಗ್ರ ಆರ್ಥಿಕ, ಸಾಮಾಜಿಕ ಹಾಗೂ ಶೈಕ್ಷಣಿಕವಾಗಿ ಅಭಿವೃದ್ಧಿಪಡಿಸುವುದೇ ನಮ್ಮ ಸರ್ಕಾರದ ಗುರಿ ಎಂದು ಸದಸ್ಯರಿಗೆ ತಿಳಿಸಿದರು.

ಎಸ್‌ಎಂ:ಕೆಎನ್‌ವಿ:ಜೆಡಿ:ಜಿಪಿಆರ್

## ವಿದ್ಯಾರ್ಥಿ ನಿಲಯದ ವಿದ್ಯಾರ್ಥಿಗಳಿಗೆ ಪೌಷ್ಠಿಕ ಆಹಾರ

**ಬೆಂಗಳೂರು, ಜೂನ್ 20 (ಕರ್ನಾಟಕ ವಾರ್ತೆ)**

**ಪ್ರಸ್ತುತ ಜಾರಿಯಲ್ಲಿರುವ ಮಾಹೆಯಾನ ಭೋಜನದ ದರದಲ್ಲಿ ವಿದ್ಯಾರ್ಥಿಗಳಿಗೆ ಪೌಷ್ಠಿಕ ಆಹಾರವನ್ನು ನೀಡಲಾಗುತ್ತಿದೆ. ದೈನಂದಿನ ಶುಚಿತ್ವ ನಿರ್ವಹಣೆಗೆ ಪ್ರತ್ಯೇಕ ವೆಚ್ಚವನ್ನು ಭರಿಸಲು ಅವಕಾಶವಿರುತ್ತದೆ ಎಂದು ಸಮಾಜ ಕಲ್ಯಾಣ ಸಚಿವ ಹೆಚ್. ಆಂಜನೇಯ ತಿಳಿಸಿದರು.**

**ಇಂದು ಪರಿಷತ್ತಿನಲ್ಲಿ ಸದಸ್ಯೆ ವೀಣಾ ಅಚ್ಚಯ್ಯ ಅವರ ಪ್ರಶ್ನೆಗೆ ಉತ್ತರಿಸುತ್ತಾ 73 ರೂ. ವೆಚ್ಚದಲ್ಲಿ ಬಾಲಕರಿಗೆ ಮತ್ತು 105 ರೂ. ವೆಚ್ಚದಲ್ಲಿ ಬಾಲಕಿಯರಿಗೆ ಶುಚಿ ಸಂಭ್ರಮ ಕಿಟ್‌ಗಳನ್ನು ಪ್ರತಿ ಮಾಹೆ ಒದಗಿಸಲಾಗುತ್ತಿದೆ. ಕಿಟ್‌ನಲ್ಲಿ ಸೋಪು, ಟೂತ್ ಪೇಸ್ಟ್. ಟೂತ್‌ಬ್ರೆಶ್ ಮತ್ತು ಬಾಲಕಿಯರಿಗೆ ಟಾಲ್ಕಂ ಪೌಡರ್‌ನ್ನು ಹೆಚ್ಚುವರಿಯಾಗಿ ನೀಡಲಾಗುತ್ತಿದೆ ಎಂದರು.**

**ಸಮಾಜ ಕಲ್ಯಾಣ ಇಲಾಖೆವತಿಯಿಂದ ನಡೆಯುತ್ತಿರುವ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಕ್ಕೆ ಮಾಸಿಕ ಭೋಜನ ವೆಚ್ಚ 1400 ರೂ. ಗಳನ್ನು ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯದ ಮಾಸಿಕ ಭೋಜನ ವೆಚ್ಚ 1500 ರೂ. ನೀಡಲಾಗುತ್ತಿದೆ ಎಂದು ಸಚಿವರು ಸದನಕ್ಕೆ ತಿಳಿಸಿದರು.**

**ಹಾಸಿಗೆ ಹೊದಿಕೆಗೆ 3 ವರ್ಷಕ್ಕೊಮ್ಮೆ ಪ್ರತಿ ವಿದ್ಯಾರ್ಥಿಗೆ 800 ರೂ. ಪಠ್ಯಪುಸ್ತಕ ಮತ್ತು ಲೇಖನ ಸಾಮಾಗ್ರಿಗಳಿಗೆ 400 ರೂ. ಮತ್ತು ಬಾಲಕರ ಕ್ಷೌರಕ್ಕಾಗಿ ಪ್ರತಿ 2 ತಿಂಗಳಿಗೊಮ್ಮೆ 30 ರೂ. ನೀಡಲಾಗುತ್ತಿದೆ ಎಂದು ಸದನಕ್ಕೆ ತಿಳಿಸಿದರು.**

ಎಸ್‌ಎಂ:ಕೆಎನ್‌ವಿ:ಜೆಡಿ:ಜಿಪಿಆರ್

## ವಿಧಾನ ಸಭೆಯಲ್ಲಿಂದು:

1)2017 ನೇ ಸಾಲಿನ ಭಾರತ ರಾಷ್ಟ್ರೀಯ ಕಾನೂನು ವಿದ್ಯಾಲಯ (ತಿದ್ದುಪಡಿ) ವಿಧೇಯಕವನ್ನು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಟಿ.ಬಿ. ಜಯಚಂದ್ರ ವಿಧಾನ ಸಭೆಯಲ್ಲಿ ಇಂದು ಮಂಡಿಸಿದರು.

2) 2017 ನೇ ಸಾಲಿನ ಕರ್ನಾಟಕ ರಾಜ್ಯ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ(ತಿದ್ದುಪಡಿ) ವಿಧೇಯಕ

3) 2017 ನೇ ಸಾಲಿನ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್‌ರಾಜ್ ವಿಧೇಯಕಗಳನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರ ಪರವಾಗಿ ಸದನದಲ್ಲಿ ಮಂಡಿಸಲಾಯಿತು.

ವಿಧೇಯಕ ಅಂಗೀಕಾರ:

2017 ನೇ ಸಾಲಿನ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ವೈದ್ಯಾಧಿಕಾರಿಗಳು ಮತ್ತು ಇತರ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) (ತಿದ್ದುಪಡಿ) ವಿಧೇಯಕವನ್ನು ಸದನದಲ್ಲಿ ಪರ್ಯಾಯವಲೋಕನ ನಡೆಸಿ ಅಂಗೀಕರಿಸಲಾಯಿತು.

2017 ನೇ ಸಾಲಿನ ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ (ತಿದ್ದುಪಡಿ) ವಿಧೇಯಕವನ್ನು ಸದನವು ಪರ್ಯಾಯಲೋಚಿಸಬೇಕೆಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಕೆ.ಆರ್. ರಮೇಶ್‌ಕುಮಾರ್ ಸದನವನ್ನು ಕೋರಿದ ಹಿನ್ನೆಲೆಯಲ್ಲಿ ಚರ್ಚೆ ಮುಂದುವರೆಯಿತು.

ಸದನದ ಮುಂದೆ ಒಪ್ಪಿಸಲಾದ ವರದಿಗಳು:

1) ವಿಧಾನ ಸಭೆ ಅರ್ಜಿಗಳ ಸಮಿತಿಯು 24 ನೇ ವರದಿಯನ್ನು ಅದರ ಅಧ್ಯಕ್ಷರಾದ ಎನ್.ಎಚ್. ಶಿವಶಂಕರರೆಡ್ಡಿ ಅವರ ಪರವಾಗಿ ಸದನದಲ್ಲಿ ಒಪ್ಪಿಸಲಾಯಿತು.

2) 2016–17 ನೇ ಸಾಲಿನ ವಿಧಾನ ಮಂಡಲದ ಸ್ಥಳೀಯ ಸಂಸ್ಥೆಗಳ ಮತ್ತು ಪಂಚಾಯತ್‌ರಾಜ್ ಸಂಸ್ಥೆಗಳ ಸಮಿತಿಯ 23 ನೇ ವರದಿ (ಬಿ.ಆರ್. ಯಾವಗಲ್ ಅಧ್ಯಕ್ಷತೆಯ ಸಮಿತಿಯ)

3) 2016–17 ನೇ ಸಾಲಿನ ವಿಧಾನ ಮಂಡಲದ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಮಿತಿಯು 8 ನೇ ವರದಿ (ಜೆ.ಆರ್. ಲೋಬೋ ಅಧ್ಯಕ್ಷತೆಯು ಸಮಿತಿಯ)

4) 2016–17 ನೇ ಸಾಲಿನ (ಸರ್ಕಾರಿ ಭರವಸೆಗಳ ಸಮಿತಿ) ಎತ್ತಿನಹೊಳೆ ಯೋಜನೆಯ ಸ್ಥಳ ಪರಿವೀಕ್ಷಣೆಯ ವಿಶೇಷ ವರದಿಯನ್ನು (ಅಧ್ಯಕ್ಷರು ಕ್ಯಾತಸಂದ್ರ ಎನ್. ರಾಜಣ್ಣ) ಸದನದಲ್ಲಿ ಒಪ್ಪಿಸಲಾಯಿತು.

2017 ನೇ ಸಾಲಿನ ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ (ತಿದ್ದುಪಡಿ) ವಿಧೇಯಕವನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಪರ್ಯಾವಲೋಕನ ಮತ್ತು ಅಂಗೀಕಾರಕ್ಕಾಗಿ ಸದನದ ಮುಂದೆ ಸಲ್ಲಿಸಿದರು. ವಿಧೇಯಕದ ಸಾಧಕ ಬಾಧಕಗಳನ್ನು ಸದನದಲ್ಲಿ ಚರ್ಚಿಸಿದ ನಂತರ ಸರ್ಕಾರವು ಅಂತಿಮವಾಗಿ ಸದರಿ ವಿಧೇಯಕವನ್ನು ಜಂಟಿ ಸದನ ಸಮಿತಿಗೆ ಒಪ್ಪಿಸಲು ಮತ್ತು ಅದರ ಶಿಫಾರಸ್ಸಿನಂತೆ ಒಂದು ತಿಂಗಳ ಒಳಗೆ ವಿಧೇಯಕವನ್ನು ಅಂಗೀಕರಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದೆಂದರು.

ಅಂಗೀಕಾರ:

1) 2017 ನೇ ಸಾಲಿನ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ (ತಿದ್ದುಪಡಿ) ವಿಧೇಯಕ

2) 2017 ನೇ ಸಾಲಿನ ಕರ್ನಾಟಕ ರಾಜ್ಯ ಡಾ: ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕ

3) 2017 ನೇ ಸಾಲಿನ ಭಾರತ ರಾಷ್ಟ್ರೀಯ ಕಾನೂನು ವಿದ್ಯಾಲಯ (ತಿದ್ದುಪಡಿ) ವಿಧೇಯಕ

4) 2017 ನೇ ಸಾಲಿನ ಕರ್ನಾಟಕ ವೈದ್ಯಕೀಯ ಕೋರ್ಸ್‌ಗಳನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳ ಕಡ್ಡಾಯ ಸೇವಾ ತರಬೇತಿ (ತಿದ್ದುಪಡಿ) ವಿಧೇಯಕಗಳನ್ನು ಇಂದು ಸದನದಲ್ಲಿ ಅಂಗೀಕರಿಸಲಾಯಿತು.

## ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳಿಗೆ ಹೊಸದಾಗಿ ಪ್ರವೇಶ ಪಡೆಯಲು ಆನ್‌ಲೈನ್ ಮೂಲಕ ಅರ್ಜಿ ಆಹ್ವಾನ

**ಬೆಂಗಳೂರು, ಜೂನ್ 20 (ಕರ್ನಾಟಕ ವಾರ್ತೆ)**

ಸಮಾಜ ಕಲ್ಯಾಣ ಇಲಾಖೆಯು ಪರಿಶಿಷ್ಟ ಜಾತಿ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ರಾಜ್ಯಾದ್ಯಂತ 12131 ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳನ್ನು ನಿರ್ವಹಿಸುತ್ತಿದೆ.

ಈ ವಿದ್ಯಾರ್ಥಿ ನಿಲಯಗಳಲ್ಲಿ 5 ರಿಂದ 10 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಪ್ರವೇಶವನ್ನು ನೀಡಲಾಗುವುದು. ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಗೆ ಭೋಜನ, ವಸತಿ ಸೌಲಭ್ಯ ಹಾಗೂ ಸಮವಸ್ತ್ರ, ಶೂ ಮತ್ತು ಸಾಕ್ಸ್, ಪಠ್ಯ ಪುಸ್ತಕ ಮತ್ತು ಲೇಖನ ಸಾಮಾಗ್ರಿಗಳು, ಶುಚಿ ಸಂಭ್ರಮ ಕಿಟ್ ಮುಂತಾದ ಸೌಲಭ್ಯಗಳನ್ನು ನೀಡಲಾಗುವುದು.

2017-18 ನೇ ಸಾಲಿನಲ್ಲಿ ಇಲಾಖಾವತಿಯಿಂದ ನಿರ್ವಹಿಸುತ್ತಿರುವ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳಿಗೆ ಹೊಸದಾಗಿ ಪ್ರವೇಶ ಪಡೆಯುವ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಹೊಸದಾಗಿ ತಂತ್ರಾಂಶವನ್ನು ಸಿದ್ಧಪಡಿಸಿ ಜೂನ್ 2 ರಂದು ಬಿಡುಗಡೆ ಮಾಡಿದೆ. ಈ ಸಂಬಂಧ ವಿದ್ಯಾರ್ಥಿಗಳು ಸಮಾಜ ಕಲ್ಯಾಣ ಇಲಾಖೆಯ ವೆಬ್‌ಸೈಟ್ ವಿಳಾಸ : www.sw.kar.nic.in ರಲ್ಲಿ ಆನ್‌ಲೈನ್ ಮೂಲಕ ಅರ್ಜಿಯನ್ನು ಸಲ್ಲಿಸಬಹುದಾಗಿದೆ ಎಂದು ಸಮಾಜ ಕಲ್ಯಾಣ ಇಲಾಖೆಯ ಪ್ರಕಟಣೆ ತಿಳಿಸಿದೆ.

ಎಸ್‌ಎಂ;ಜೆಡಿ:ಜಿಪಿಆರ್

# 2015–16 ನೇ ಸಾಲಿನ ಪೊಲೀಸ್ ಪದಕ ಪ್ರಕಟ

**ಬೆಂಗಳೂರು, ಜೂನ್ 20 (ಕರ್ನಾಟಕ ವಾರ್ತೆ)**

ಕೇಂದ್ರ ಸರ್ಕಾರದ ಅಧೀನದಲ್ಲಿ ಬರುವ ನವದೆಹಲಿಯ ಪೊಲೀಸ್ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯು ಪೊಲೀಸ್ ತರಬೇತಿ ಸಂಸ್ಥೆಗಳಲ್ಲಿ 2015–16ನೇ ಸಾಲಿನಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ತರಬೇತಿದಾರರನ್ನು, ತರಬೇತಿ ಸಹಾಯಕರಾದವರನ್ನು ಗುರುತಿಸಿ ಪ್ರೋತ್ಸಾಹಿಸುವ ಸಲುವಾಗಿ ಪದಕ ನೀಡಲು ತೀರ್ಮಾನಿಸಿದೆ.

ಈ ಪದಕಗಳಿಗಾಗಿ 2015–16 ನೇ ಸಾಲಿನಲ್ಲಿ ಕರ್ನಾಟಕ ರಾಜ್ಯದ ಕೆ.ಬಿ. ಶಿವಪ್ರಸಾದ್ ಪಿ.ಎಸ್.ಐ., (ಒಳಾಂಗಣ), ಚನ್ನಪಟ್ಟಣ, ಕೆ.ಎಸ್. ಪಾಟೀಲ್, ಎಆರ್‌ಎಸ್ಐ, ಪಿ.ಟಿ.ಎಸ್. ಖಾನಾಪುರ (ಹೊರಾಂಗಣ) ಆರ್.ಸಿ. ಮಹೇಶ್, ಎಪಿಸಿ, ಪಿ.ಟಿ.ಎಸ್. ಚನ್ನಪಟ್ಟಣ (ಹೊರಾಂಗಣ) ಇವರುಗಳು ಆಯ್ಕೆಯಾಗಿದ್ದು, ಇವರುಗಳನ್ನು ಸೇವೆಯಲ್ಲಿ ಸಲ್ಲಿಸಿದ ಉತ್ಕೃಷ್ಟ ಕಾರ್ಯವನ್ನು ಪರಿಗಣಿಸಿ ಈ ಪದಕವನ್ನು ನೀಡಲಾಗಿದೆ ಎಂದು ಡೈರೆಕ್ಟರ್ ಜನರಲ್ ಮತ್ತು ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್‌ರವರ ಕಚೇರಿ ಪ್ರಕಟಣೆ ತಿಳಿಸಿದೆ.

(ಛಾಯಾಚಿತ್ರ ಲಗತ್ತಿಸಿದೆ)

ಎಸ್‌ಎಂ;ಜೆಡಿ:ಜಿಪಿಆರ್

# ಡಿಪ್ಲೋಮಾ ಪರೀಕ್ಷೆಗಳ ಫಲಿತಾಂಶ ಪ್ರಕಟ

**ಬೆಂಗಳೂರು, ಜೂನ್ 20 (ಕರ್ನಾಟಕ ವಾರ್ತೆ)**

2017ರ ಏಪ್ರಿಲ್/ಮೇ ತಿಂಗಳಲ್ಲಿ ನಡೆದ ತಾಂತ್ರಿಕ ಪರೀಕ್ಷಾ ಮಂಡಳಿಯ ಡಿಪ್ಲೊಮಾ ಪರೀಕ್ಷೆಗಳ ಫಲಿತಾಂಶಗಳನ್ನು ಜೂನ್ 21 ರಂದು ಅಪರಾಹ್ನ 3.00 ಗಂಟೆಗೆ ರಾಜ್ಯದಲ್ಲಿನ ಎಲ್ಲಾ ಪಾಲಿಟೆಕ್ನಿಕ್‌ಗಳಲ್ಲಿ ಪ್ರಕಟಿಸಲಾಗುವುದು.

ಪರೀಕ್ಷಾ ಫಲಿತಾಂಶವು ವೆಬ್‌ಸೈಟ್ www.btekarlinx.net ವಿಳಾಸದಲ್ಲಿ ಲಭ್ಯವಿರುತ್ತದೆ ಎಂದು ತಾಂತ್ರಿಕ ಪರೀಕ್ಷಾ ಮಂಡಳಿಯ ಪ್ರಕಟಣೆ ತಿಳಿಸಿದೆ.

ಎಸ್‌ಎಂ;ಜೆಡಿ:ಜಿಪಿಆರ್